





‘ಕಿವಿಯೋಲೆ, ಸರ, ಪೆಂಡೆಂಟ್, ಜೂಡಾ ಸ್ಟಿಕ್ ಹಾಗೂ ಬಳೆಗಳಲ್ಲಿ ಕವಡೆಗಳ ವಿನ್ಯಾಸ ಬಲು ಸುಂದರವಾಗಿರುತ್ತದೆ.

**-ಸರೋಜಿನಿ,** ವಸ್ತ್ರವಿನ್ಯಾಸಕಿ

ಮಣ್ಣು, ಮಣಿ, ಪ್ರಾಣಿಗಳ ಮೂಳೆಗಳಿಂದ ಆಭರಣಗಳನ್ನು ತಯಾರಿಸಿಕೊಳ್ಳುತ್ತಿದ್ದ. ಆನಂತರ ಕಡಲಲ್ಲಿ ಸಿಗುವ ವಸ್ತುಗಳನ್ನೂ ಬಳಸಿಕೊಂಡ. ಆಫ್ರಿಕಾದಲ್ಲಿ ಕೆಲವು ಬುಡಕಟ್ಟು ಜನಾಂಗ, ತಮ್ಮ ದೇಹಾಲಂಕಾರಕ್ಕೆ ಕವಡೆಗಳನ್ನು ಆಭರಣ ರೂಪದಲ್ಲಿ ತೊಡುತ್ತಿದ್ದರು ಎನ್ನುವುದು ಇತಿಹಾಸ ಕೆದಕಿದರೆ ಕಾಣುತ್ತದೆ. ಕಡಲ ಕಿನಾರೆಗಳಲ್ಲಿ ವಾಸಿಸುತ್ತಿದ್ದ, ಇಲ್ಲವೇ ಮೀನುಗಾರರ ಕುಟುಂಬಗಳು ತಮ್ಮನ್ನು ಅಲಂಕರಿಸಿಕೊಳ್ಳಲು ಅಲ್ಲೇ ಸುಲಭದಲ್ಲಿ, ತಡಿಗಳಲ್ಲಿ ಸಿಗುತ್ತಿದ್ದ ಶಂಖು, ಕವಡೆ, ಕಪ್ಪೆ ಚಿಪ್ಪುಗಳನ್ನೇ ಬಳಸಿ ಕ್ರಿಯಾಶೀಲತೆಯಿಂದ ಆಭರಣಗಳನ್ನು ತಯಾರಿಸಿಕೊಳ್ಳುತ್ತಿದ್ದರು. ಅವುಗಳಲ್ಲೇ ಬಳೆ, ಕಿವಿಯೋಲೆ, ಉಂಗುರ, ಉದ್ದದ ಸರಗಳನ್ನು ತಯಾರಿಸಿ ತೊಡುತ್ತಿದ್ದರು ಎನ್ನಲಾಗಿದೆ.

ಸೌಂದರ್ಯ ಪ್ರಜ್ಞೆ ಜಾಗೃತಗೊಳ್ಳುತ್ತಿದ್ದಂತೆ ಮಾನವ, ಲೋಹಗಳನ್ನು ಆಭರಣಗಳಿಗೆ ಒಗ್ಗಿಸಿಕೊಂಡ. ಅದರಲ್ಲಿ ಕಣ್ಣು ಕೋರೈಸುವ ವಿನ್ಯಾಸಗಳನ್ನು ರೂಪಿಸಿದ. ಅಂದ ಚೆಂದದ ಪರಿಕಲ್ಪನೆಗಳು ಸಾಕಷ್ಟು ಹೊಸತನಗಳಿಗೆ ದಾರಿ ಮಾಡಿಕೊಟ್ಟವು. ಫ್ಯಾಷನ್ ಬಗೆಗಿನ ದೃಷ್ಟಿಕೋನವೂ ವಿಸ್ತಾರವಾಗುತ್ತಾ ಹೋಯಿತು. ಇದೀಗ ಮತ್ತೆ ಮೂಲದತ್ತ ಆಧುನಿಕರ ಚಿತ್ತ ಹೊರಳಿದೆ.

ಶತಶತಮಾನಗಳ ಹಿಂದೆ, ಕವಡೆಗಳು ಹಣದ ರೂಪದಲ್ಲೂ ಬಳಕೆಯಾಗುತ್ತಿದ್ದವು. ಕವಡೆಗಳನ್ನು ಸಂಪತ್ತು, ಒಳಿತಿನ ಪ್ರತೀಕದಂತೆ ನೋಡಲಾಗುತ್ತಿತ್ತು. ಇದೇ ಕಾರಣಕ್ಕೆ ಕವಡೆಯನ್ನು ಆಭರಣದಂತೆ ತೊಡಲಾಗುತ್ತಿತ್ತು. ಕವಡೆಯನ್ನು ‘ಕಪರ್ದಿಕಾ’ ಎಂದೂ ಕರೆಯುತ್ತಾರೆ. ಇದನ್ನು ಆರೋಗ್ಯವರ್ಧಕ ಹಾಗೂ ಆಯುಷ್ಯವರ್ಧಕ ಎಂದು ಪರಿಗಣಿಸಿದ್ದು, ಕೆಲ ಬುಡಕಟ್ಟು ಸಂಸ್ಕೃತಿಯಲ್ಲಿ, ಮಗು ಹುಟ್ಟಿದ ನಂತರ ಅದರ ಕೊರಳಿಗೆ ಕವಡೆ ಸರ ಹಾಕುವ ವಾಡಿಕೆಯಿದೆ.

ಇಂಥ ಕವಡೆಯ ಆಭರಣಗಳಿಗೆ ಈಗ ಆಧುನಿಕತೆಯ ಲೇಪ ದೊರೆತಿದೆ. ಕವಡೆಗಳ ನೈಸರ್ಗಿಕ ವಿನ್ಯಾಸಕ್ಕೆ ಮಾರುಹೋದ ಆಧುನಿಕ ಆಭರಣ ವಿನ್ಯಾಸಕರು ಕವಡೆಗಳನ್ನು ಉಪಯೋಗಿಸಿಕೊಂಡು ಭಿನ್ನ ಭಿನ್ನ ಫ್ಯಾಷನ್ ಪ್ರಯೋಗಗಳನ್ನು ಮಾಡುತ್ತಿದ್ದಾರೆ. ಇಂಥ ಪ್ರಯೋಗ ಮಾಡಿದವರಲ್ಲಿ ಬೆಂಗಳೂರಿನ ವಿನ್ಯಾಸಕಿ ಸರೋಜಿನಿ ಕೂಡ ಒಬ್ಬರು.

ಕವಡೆಗಳನ್ನು ಮರದ ಮಣಿಗಳು, ಹುಣಸೆ ಬೀಜಗಳೊಂದಿಗೆ ಸೇರಿಸಿ ಹಲವು ಶೈಲಿಯ ಕಿವಿಯೋಲೆಗಳನ್ನು ವಿನ್ಯಾಸಗೊಳಿಸಿದ್ದಾರೆ ಇವರು. ಜೂಡಾ ಪಿನ್‌ಗಳನ್ನು, ಕವಡೆ ಸರ, ನೆಕ್ಲೇಸ್, ಬಳೆಗಳಿಗೂ ಕವಡೆ ವಿನ್ಯಾಸವನ್ನು ಒಗ್ಗಿಸಿದ್ದಾರೆ.

‘ಅನನ್ಯತೆ ಬಯಸುವ ಮಹಿಳೆಯರು ಕವಡೆ ಒಡವೆಗಳನ್ನು ಮೆಚ್ಚುತ್ತಾರೆ. ಫ್ಯಾಷನ್‌ನಲ್ಲಿ ಪ್ರಯೋಗ ಮಾಡಲು ಬಯಸುವ, ಅಪರೂಪದ ಹಾಗೂ ನೈಸರ್ಗಿಕ ಆಭರಣಗಳನ್ನು ಬಯಸುವ, ಕಲಾಸಕ್ತಿಯಿರುವ ಮಹಿಳೆಯರು ಕವಡೆಗಳಲ್ಲಿ ರೂಪಿಸಿದ ವಸ್ತುಗಳನ್ನು ಇಷ್ಟಪಡುತ್ತಾರೆ’ ಎಂಬ ವಿವರಣೆ ಅವರದ್ದು.

‘ಕಿವಿಯೋಲೆ, ಸರ, ಪೆಂಡೆಂಟ್, ಜೂಡಾ ಸ್ಟಿಕ್ ಹಾಗೂ ಬಳೆಗಳಲ್ಲಿ ಕವಡೆಗಳ ವಿನ್ಯಾಸ ಬಲು ಸುಂದರವಾಗಿರುತ್ತದೆ. ಇಷ್ಟೇ ಅಲ್ಲದೇ, ಹೆಣ್ಣು ಮಕ್ಕಳ ದುಪಟ್ಟಾ, ವಸ್ತ್ರಗಳು, ವ್ಯಾನಿಟಿ, ಬ್ಯಾಗ್, ಪೌಚ್‌ಗಳಿಗೂ ಕವಡೆ ಚೆಂದವಾಗಿ ಒಪ್ಪುತ್ತದೆ. ಬಟ್ಟೆಗಳಲ್ಲಿ ಬಟನ್‌ಗಳಂತೆ, ಮೋತಿಫ್, ತೋಳಿನ ಮೇಲೆ, ಜಿಪ್‌ಗಳಲ್ಲಿ, ಡಾಬಿನಂತೆ, ಕುಪ್ಪಸಗಳಲ್ಲಿ ಕೂಡ ಕವಡೆ ವಿನ್ಯಾಸ ಮಾಡಬಹುದು. ತಮ್ಮದೇ ಫ್ಯಾಷನ್ ವ್ಯಾಖ್ಯಾನ ನೀಡಬಯಸುವ ಯುವತಿಯರು ಇದಕ್ಕೆ ಗ್ರಾಹಕರು’ ಎನ್ನುತ್ತಾರೆ.

‘ಸದ್ಯ ಪಶ್ಚಿಮ ಬಂಗಾಳದಲ್ಲಿ, ಫ್ಯಾಷನ್ ಆಕ್ಸೆಸರಿಗಳಲ್ಲಿ ಕವಡೆಗಳನ್ನು ಹೇರಳವಾಗಿ ಬಳಸಲಾಗುತ್ತಿದೆ. ಈಗೀಗ ದಕ್ಷಿಣದಲ್ಲಿಯೂ ಕವಡೆಗಳೆಡೆಗೆ ಒಲವು ಹೆಚ್ಚುತ್ತಿದೆ’ ಎಂದು ಮಾಹಿತಿ ನೀಡುತ್ತಾರೆ.

ಫ್ಯಾಷನ್ ಎನ್ನುವುದೇ ಸೃಜನಶೀಲತೆಯ ವಿಷಯ. ಅದು ಹಳತೊಂದನ್ನು ಹೊಸತಾಗಿ ರೂಪಿಸುವುದರಲ್ಲಿರಬಹುದು ಅಥವಾ ಜನಪ್ರಿಯ ಶೈಲಿಯೊಂದರ ವಿಕಾಸದಂತೆಯೂ ಹೊರಹೊಮ್ಮಬಹುದು. ಇಲ್ಲವೇ ಭಿನ್ನತೆಯ ಹುಡುಕಾಟದಲ್ಲಿ ಕಂಡ ಅಪರೂಪದ ಪ್ರಯೋಗವೂ ಆಗಬಹುದು. ಅಂಥ ಪ್ರಯೋಗದ ಸಾಲಿಗೆ ಕವಡೆ ಫ್ಯಾಷನ್ ಕೂಡ ಸೇರಿಕೊಂಡಿದೆ.